ಒರಟಾದ ರೆಕ್ಕೆಗಳು, ರಕ್ತದಂತೆ ಕೆಂಪು ಕಾರುವ ಕಣ್ಣು, ಮುಳ್ಳುಗಳನ್ನು ಹೊತ್ತ ಅಗಲವಾದ ಕಾಲುಗಳು. ಹದ್ದನ್ನು ನೋಡಿ ಸಲೀಂ ಭಯದಿಂದ ನಿಂತು ಬಿಡುತ್ತಾನೆ. ಹದ್ದು ಅವನನ್ನು ಕಾಲುಗಳಲ್ಲಿ ಬಿಗಿಯಾಗಿ ಹಿಡಿದು ಹಾರಿಕೊಂಡು ಹೋಗಿ ಗೋಲ್ಕೊಂಡ ಕೋಟೆಯ ದೊಡ್ಡ ಬಂಡೆಯ ಮೇಲೆ ಹಾಕಿ ಚೂಪಾದ ಕೊಕ್ಕಿನಿಂದ ಕುಕ್ಕಲು ಪ್ರಾರಂಭಿಸುತ್ತದೆ. ಅವನ ದೇಹದ ತುಂಬಾ ಗಾಯಗಳಾಗಿ ರಕ್ತ ಚಿಮ್ಮುವುದರೊಂದಿಗೆ ಭಯಂಕರ ನೋವಾಗಿ ಜೋರಾಗಿ ಚೀರಿಕೊಳ್ಳುತ್ತಾನೆ. ಅದರೊಂದಿಗೆ ಕನಸು ಕಳಚಿಕೊಂಡು ಎಚ್ಚರವಾಗುತ್ತದೆ. ಎಚ್ಚರಗೊಂಡಾಗ ಸಲೀಮನ ಮೈ ಸಣ್ಣದಾಗಿ ನಡುಗುತ್ತಿತ್ತು.

''ಯಾಕೆ ಸಲೀಮ್, ಏನಾಯ್ತು...'' ಎಂದು ತಾಯಿ ಕೇಳಿದ್ದಳು. ''ಏನೋ ಕೆಟ್ಟ ಕನಸು ಬಿದ್ದಂತಾಯ್ತು ಅಮ್ಮೀಜಾನ್...'' ಎಂದು ಎದ್ದು ನೀರು ಕುಡಿದಿದ್ದ. ''ಏನಾದರೂ ಚಿಂತೆಯನ್ನು ತಲೆಗಾಕಿಕೊಂಡರೆ ಅಂಥ ಕನಸುಗಳು ಬೀಳುತ್ತವೆ ಮಗನೆ. ಮತ್ತು ಕನಸುಗಳಿಗೆ ಎಂಥಾ ಅರ್ಥವೂ ಇರುವುದಿಲ್ಲ. ತುಂಬಾ ಯೋಚನೆ ಮಾಡಬೇಡ, ನಿನ್ನ ವ್ಯಾಪಾರದಿಂದ ಸಂಸಾರ ಸಲೀಸಾಗಿಯೇ ನಡೆಯುತ್ತಿದೆಯಲ್ಲಾ. ಅಲ್ಲಾ ನಮಗೆ ಯಾವೊತ್ತೂ ಕೆಟ್ಟದ್ದು ಮಾಡಲಾರ...'' ಎಂದು ಅಮ್ಮ ಸಮಾಧಾನ ಮಾಡಿದ್ದಳು. ಮತ್ತೆ ಮಲಗಿದವನನ್ನು ನಿದ್ದೆ ಆವರಿಸಿಕೊಂಡಿತ್ತು .

ಮಾರನೆಯ ದಿನ ಹನ್ನೆರಡೂವರೆ ಗಂಟೆಗೆ ಚಾರ್ಮಿನಾರ್ ಬಳಿಯಿಂದ ಬೇಗಂ ಪೇಟೆಗೆ ಹೋಗುವ ಬಸ್ಸು ಹತ್ತಿದ ಸಲೀಮನ ಮನಸ್ಸಿನಲ್ಲಿ ಒಂಥರಾ ದ್ವಂದ್ವ ಯುದ್ಧ ಪ್ರಾರಂಭವಾಯಿತು. ದೊಡ್ಡವರ, ತುಂಬಾ ಉಳ್ಳವರ ಸ್ನೇಹವಾಗಲೀ, ದ್ವೇಷವಾಗಲೀ ಒಳ್ಳೆಯದಲ್ಲ ಎಂದು ಅಮ್ಮ ಸದಾ ಹೇಳುತ್ತಿದ್ದಳು. ಚಾಂದ್ ಬಾನು ತನ್ನೊಂದಿಗೆ ತಮಾಷೆಯ ಆಟವಾಡುತ್ತಿರಬಹುದೆ? ಅವಳಿಗೂ ತನಗೂ ನಡುವೆ ಎಷ್ಟು ಅಜಗಜಾಂತರ! ದೊಡ್ಡವರು ಮೋಸದಾಟವಾಡುವ ಕತೆಗಳನ್ನು ಕೇಳಿದ್ದನವನು. ಉಳ್ಳವರು ಮುಳ್ಳುಗಳಿದ್ದಂತೆ, ಇಲ್ಲದವರು ಎಲೆಯಿದ್ದಂತೆ. ಮುಳ್ಳಿನ ಮೇಲೆ ಎಲೆ ಬಿದ್ದರೂ, ಎಲೆಯ ಮೇಲೆ ಮುಳ್ಳು ಬಿದ್ದರೂ ಹರಿದುಹೋಗುವುದಂತೂ ಎಲೆಯೇ! ಚಾಂದ್ ಬಾನು ಅಂಥವಳಲ್ಲ, ಊಟ ಮಾಡಿ ಏನು ಹೇಳುತ್ತಾಳೋ ಕೇಳಿಸಿಕೊಂಡು ಹೋದರಾಯಿತು ಎನ್ನುವ ಧೈರ್ಯ ಇನ್ನೊಂದೆಡೆ. ಒಂದೂಕಾಲು ಗಂಟೆಗೆ ಬೇಗಂಪೇಟೆ ನಿಲ್ದಾಣದಲ್ಲಿ ಇಳಿದು ನಡೆಯತೊಡಗಿದ. ಯಾಕೋ ಕಾಲುಗಳಲ್ಲಿ ನಡುಕ ಹುಟ್ಟಿತ್ತು. ಮತ್ತೆ ತಲೆಯಲ್ಲಿ ಏನೇನೋ ಆಲೋಚನೆಗಳು. ಇರಲಿ ಎಂದು ಎರಡು ಸಾವಿರ ರೂಪಾಯಿಗಳನ್ನು ಜೇಬಿಗಿಟ್ಟುಕೊಂಡು ಬಂದಿದ್ದ. ಎದುರಗಡೆ ಇದ್ದ ಬ್ಲೂಫಾಕ್ಸ್ ಹೋಟೆಲ್‌ಗೆ ಹೋಗಲು ರಸ್ತೆ ದಾಟುವಾಗ ಪ್ಯಾಂಟ್ ಜೇಬಲ್ಲಿ ಇದ್ದ ಹಣವನ್ನು ತಡಕಾಡುವುದಕ್ಕೂ ದೊಡ್ಡ ಕಾರೊಂದು ಜೋರಾಗಿ ಗುದ್ದುವುದಕ್ಕೂ ಒಂದೇ ಆಗಿತ್ತು. ಸಲೀಮನಿಗೆ ಪ್ರಜ್ಞೆ ಬಂದಾಗ ಉಸ್ಮಾನಿಯ ಆಸ್ಪತ್ರೆಯಲ್ಲಿ ಇದ್ದ. ಬಲಗಾಲು ಮುರಿದುಹೋಗಿತ್ತು. ಅಪಘಾತ ಮಾಡಿದ ಕಾರಿನವರೇ ಕೂಡಲೇ ಆಸ್ಪತ್ರೆಗೆ ಸೇರಿಸಿ ಆಪರೇಷನ್ ಕೂಡ ಮಾಡಿಸಿ ಪ್ರಾಣ ಉಳಿಸಿದ್ದರು. ಇತ್ತ ಬ್ಲೂಫಾಕ್ಸ್ ರೆಸ್ಟೋರೆಂಟ್‌ನಲ್ಲಿ ಟೇಬಲ್ ಹಿಡಿದುಕೊಂಡು ಮೂರೂವರೆ ಗಂಟೆಯವರೆಗೂ ಸಲೀಮನಿಗೆ ಕಾದು ಕುಳಿತಿದ್ದ ಚಾಂದ್ ಬಾನುಗೆ ಕೋಪ ಬಂದಿತ್ತು. ಸಲೀಮನ ಮೊಬೈಲ್ ಫೋನ್ ನಂಬರ್ ಕೂಡ ಪಡೆದಿರಲಿಲ್ಲ. ಈ ಗರೀಬ್ ಜನರೇ ಅಷ್ಟು. ಉಳ್ಳವರು ಹತ್ತಿರ ಹೋದರೂ ಅವರು ದೂರ ಸರಿಯುತ್ತಾರೆ. ಬಹುಶಃ ಕೀಳರಿಮೆಯಿಂದಾಗಿ ಅವನು ಬಂದಿಲ್ಲದಿರಬಹುದು, ಅಂತರ ಜಾಸ್ತಿ ಇರುವವರ ನಡುವೆ ಸ್ನೇಹ ಸಂಬಂಧ ಚಿಗುರೊಡೆಯುವುದು ಕಷ್ಟವಾಗುತ್ತದೆ. ಚಾರ್ಮಿನಾರ್ ಬಳಿ ಅವನಿಗೊಂದು ದೊಡ್ಡ ಅತ್ತರು ಅಂಗಡಿ ಹಾಕಿಕೊಟ್ಟು ಸಾಧ್ಯವಾದರೆ ಅವನನ್ನು ಪ್ರೀತಿಸಬೇಕೆಂದು ಯೋಚಿಸಿದ್ದವಳು ಈಗ ಮತ್ತೊಮ್ಮೆ ಅವನನ್ನು ಭೇಟಿಯಾಗಿ ತೊಂದರೆ ಕೊಡಬಾರದೆಂದು ಗಟ್ಟಿ ಮನಸ್ಸಿನಿಂದ ನಿರ್ಧರಿಸಿ ಬಿರಿಯಾನಿ ತಿನ್ನದೆ ಒಂದು ಪ್ಲೇಟ್ ಚಿಲ್ಲಿ ಚಿಕನ್ ಮತ್ತು ಐಸ್ ಕ್ರೀಮ್ ತಿಂದು ಹೊರಟು ಹೋಗಿದ್ದಳು.